C.No. 2329

**ಕರ್ನಾಟಕ ಸರ್ಕಾರ**
**ಅರಣ್ಯ ಇಲಾಖೆ**

ಸಂಖ್ಯೆ:ಪಿಸಿಸಿಎಫ್(ಹೆಚ್‌ಓಎಫ್‌ಎಫ್)
ಬಿ4/ಸಿಬ್ಬಂದಿ/ಸಿಆರ್- 40/2010-11

ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ
(ಮುಖ್ಯಸ್ಥರು ಅರಣ್ಯ ಪಡೆ) ರವರ ಕಚೇರಿ,
ಅರಣ್ಯ ಭವನ, ಮಲ್ಲೇಶ್ವರಂ,
ಬೆಂಗಳೂರು-3, ದಿನಾಂಕ:5 .05.2016

# ಸುತ್ತೋಲೆ

**ವಿಷಯ:** ಕರ್ನಾಟಕ ಸಿವಿಲ್ ಸೇವಾ (ಕಂಪ್ಯೂಟರ್ ಸಾಕ್ಷರತಾ ನಿಯಮಗಳು) 2012 ರ ಸಾಕ್ಷರತಾ ನಿಯಮಗಳನ್ನು ಜಾರಿಗೊಳಿಸುವ ಬಗ್ಗೆ.

**ಉಲ್ಲೇಖ:**
1. ಸರ್ಕಾರದ ಅಧಿಸೂಚನೆ ಸಂಖ್ಯೆ:ಸಿಆಸುಇ 43 ಸೇವನೆ 2008 ದಿನಾಂಕ:07.03.2012
2. ಸರ್ಕಾರಿ ಅಧಿಸೂಚನೆ ಸಂಖ್ಯೆ: ಡಿಪಿಎಆರ್ 59 ಎಸ್‌ಸಿಆರ್ 2012 ದಿನಾಂಕ:06.08.2012.
3. ಸರ್ಕಾರಿ ಅಧಿಸೂಚನೆ ಸಂಖ್ಯೆ: ಡಿಪಿಎಆರ್ 43 ಎಸ್‌ಆರ್‌ಎಸ್ 2008 ದಿನಾಂಕ:18.12.2012.
4. ಸರ್ಕಾರಿ ಆದೇಶ ಸಂಖ್ಯೆ: ಸಿಆಸುಇ 34 ಇಆಇ 2012 ಬೆಂಗಳೂರು ದಿನಾಂಕ:28.03.2014
5. ಸರ್ಕಾರಿ ಅಧಿಸೂಚನೆ ಸಂಖ್ಯೆ: ಡಿಪಿಎಆರ್ 154 ಎಸ್‌ಸಿಆರ್ 2014 ದಿನಾಂಕ:27.04.2015

******

ಉಲ್ಲೇಖ(1) ರಿಂದ (4)ರ ವರೆಗಿನ ಎಲ್ಲಾ ಸರ್ಕಾರದ ಅಧಿಸೂಚನೆ ಮತ್ತು ಆದೇಶಗಳ ಪ್ರತಿಗಳನ್ನು ಈಗಾಗಲೇ ಅಧೀನ ಅಧಿಕಾರಿಗಳಿಗೆ ಕಳುಹಿಸಿ ಅವರ ಗಮನಕ್ಕೆ ತರಲಾಗಿದೆ.

ಸರ್ಕಾರದ ಅಧಿಸೂಚನೆ ಸಂಖ್ಯೆ:ಸಿಆಸುಇ 43 ಸೇವನೆ 2008 ದಿನಾಂಕ:07.03.2012ರಲ್ಲಿ, ಕರ್ನಾಟಕ ಸರ್ಕಾರವು ಕಂಪ್ಯೂಟರ್ ಸಾಕ್ಷರತಾ ನಿಯಮ 2012 ನ್ನು ಜಾರಿಗೊಳಿಸಿರುತ್ತದೆ. ಸದರಿ ನಿಯಮಗಳ ಪ್ರಕಾರ ಸರ್ಕಾರಿ ಸೇವೆಯಲ್ಲಿ ಈಗಾಗಲೇ ಕರ್ತವ್ಯ ನಿರ್ವಹಿಸುತ್ತಿರುವ ನೌಕರರು ಹಾಗೂ ನೇರ ನೇಮಕಾತಿಯಿಂದ ಆಯ್ಕೆಯಾಗುವ ಅಭ್ಯರ್ಥಿಗಳು ನಿಗದಿತ ಸಮಯದಲ್ಲಿ ಕಂಪ್ಯೂಟರ್ ಸಾಕ್ಷರತಾ ಪರೀಕ್ಷೆಯನ್ನು ತೇರ್ಗಡೆ ಹೊಂದುವ ಕುರಿತು ಸೂಚನೆಗಳನ್ನು ನೀಡಲಾಗಿದೆ.

ದಿನಾಂಕ:06.08.2012 ರ ಅಧಿಸೂಚನೆಯಲ್ಲಿ, ನೇರ ನೇಮಕಾತಿಗೆ ಸಂಬಂಧಿಸಿದಂತೆ ನಿಯಮ (2)ರಲ್ಲಿ, ರಾಜ್ಯ ಸಿವಿಲ್ ಸೇವೆಗಳಲ್ಲಿನ ಯಾವುದೇ ಹುದ್ದೆಗೆ ನೇರ ನೇಮಕಾತಿ ಮುಖಾಂತರ ನೇಮಕಾತಿ ಹೊಂದಿದ ನೌಕರರು ಸರ್ಕಾರ ನಿಗದಿಪಡಿಸಬಹುದಾದ ಕಂಪ್ಯೂಟರ್ ಸಾಕ್ಷರತಾ ಪರೀಕ್ಷೆಯನ್ನು ಪರಿವೀಕ್ಷಣಾ ಅವಧಿಯಲ್ಲಿ ಉತ್ತೀರ್ಣರಾಗತಕ್ಕದ್ದು, ಆ ಪರೀಕ್ಷೆ ಪಾಸು ಮಾಡದ ಹೊರತು ಅವರ ಪರಿವೀಕ್ಷಣಾ ಅವಧಿಯನ್ನು ಘೋಷಿಸತಕ್ಕದ್ದಲ್ಲ ಎಂಬುದಾಗಿ ತಿಳಿಸಲಾಗಿದೆ.

ಸರ್ಕಾರಿ ಅಧಿಸೂಚನೆ ಸಂಖ್ಯೆ: ಡಿಪಿಎಆರ್ 43 ಎಸ್‌ಆರ್‌ಎಸ್ 2008 ದಿನಾಂಕ:18.12.2012 ರಲ್ಲಿ, ಸದರಿ ಪರೀಕ್ಷೆಯ ಪಠ್ಯಕ್ರಮವನ್ನು ವಿವರವಾಗಿ ಪ್ರಕಟಿಸಲಾಗಿದೆ. ದಿನಾಂಕ:07.03.2012 ಸರ್ಕಾರಿ ಅಧಿಸೂಚನೆಯ ನಿಯಮ(3) ರಲ್ಲಿ, ಯಾವುದೇ ಸರ್ಕಾರಿ ನೌಕರರು ಈ ನಿಯಮಗಳ ಪ್ರಾರಂಭದ ದಿನಾಂಕದಿಂದ ಮೂರು ವರ್ಷಗಳ ಅವಧಿಯೊಳಗೆ ಪರೀಕ್ಷೆ ಉತ್ತೀರ್ಣ ಆಗದೇ ಇದ್ದಲ್ಲಿ ಮುಂಬಡ್ತಿಗೆ ಅರ್ಹನಾಗತಕ್ಕದ್ದಲ್ಲ ಹಾಗೂ ನಿಯಮ ಪ್ರಾರಂಭವಾದ ನಾಲ್ಕು ವರ್ಷಗಳ ಅವಧಿಯೊಳಗೆ ಪರೀಕ್ಷೆ ಉತ್ತೀರ್ಣರಾಗದೇ ಇದ್ದಲ್ಲಿ ವಾರ್ಷಿಕ ವೇತನ ಬಡ್ತಿ ಗಳಿಸಲು ಅರ್ಹನಾಗತಕ್ಕದ್ದಲ್ಲ, ಎಂದು ತಿಳಿಸಲಾಗಿದೆ.

ಸರ್ಕಾರಿ ಆದೇಶ ಸಂಖ್ಯೆ: ಸಿಆಸುಇ 34 ಇಆಇ 2012 ಬೆಂಗಳೂರು ದಿನಾಂಕ:28.03.2014 ರಲ್ಲಿ, ಪರೀಕ್ಷೆಗಳನ್ನು ಯಾವ ರೀತಿಯಾಗಿ ನಡೆಸಬೇಕೆಂಬ ಬಗ್ಗೆ ವಿವರವಾಗಿ ಸೂಚಿಸಲಾಗಿದೆ. ಇದಲ್ಲದೆ, ಸದರಿ ನಿಯಮಗಳಿಗೆ ಹಲವು ತಿದ್ದುಪಡಿಗಳನ್ನು ಜಾರಿಗೊಳಿಸಲಾಗಿದೆ. ಸರ್ಕಾರಿ ಅಧಿಸೂಚನೆ ಸಂಖ್ಯೆ: ಡಿಪಿಎಆರ್ 154 ಎಸ್‌ಸಿಆರ್ 2014 ದಿನಾಂಕ:27.04.2015 ರಲ್ಲಿ, ಕಂಪ್ಯೂಟರ್ ಸಾಕ್ಷರತಾ ನಿಯಮಗಳಿಗೆ ತಿದ್ದುಪಡಿ ತರಲಾಗಿದೆ. ಈ ನಿಯಮಗಳ ನಿಯಮ(2)ಕ್ಕೆ ಸಂಬಂಧಿಸಿದಂತೆ

"Within the period of their probation and the period of probation shall not be declared until he or she passes the said test", the words "within the period of their probation or within a period of five years from the date of commencement of these rules whichever is later" shall be inserted ಎಂಬುದಾಗಿ ತಿಳಿಸಲಾಗಿದೆ.

ಈಗಾಗಲೇ ಸೇವೆಯಲ್ಲಿರುವ ನೌಕರರಿಗೆ ಸಂಬಂಧಿಸಿದಂತೆ, ನಿಯಮ(3)ಕ್ಕೆ ಈ ಕೆಳಕಂಡಂತೆ ತಿದ್ದುಪಡಿ ತರಲಾಗಿದೆ.

(a)in sub-rule(1)

1. For the words "within a period of three years from the date of commencement of these rules", the words "within a period of five years from the date of commencement of these rules" shall be substituted;
2. For the words "within a period of four years from the date of commencement of these rules", the words "within a period of six years from the date of commencement of these rules" shall be substituted.

(b)In sub-rule(2), for the words "within a period of three years from the date of commencement of these rules", the words "within a period of five years from the date of commencement of these rules" shall be substituted.

ಮೇಲಿನ ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸುವಂತೆ ಎಲ್ಲಾ ಅಧಿಕಾರಿ/ಸಿಬ್ಬಂದಿಗಳ ಗಮನಕ್ಕೆ ತರಲಾಗಿದೆ ಹಾಗೂ ನಿಗದಿಪಡಿಸಲಾದ ಕಂಪ್ಯೂಟರ್ ಸಾಕ್ಷರತಾ ಪರೀಕ್ಷೆಯನ್ನು ತೇರ್ಗಡೆ ಹೊಂದಲು ಕ್ರಮ ಕೈಗೊಳ್ಳುವಂತೆ ಸೂಚಿಸಲು ಅಧೀನ ಅಧಿಕಾರಿಗಳಿಗೆ ತಿಳಿಸಲಾಗಿದೆ.

ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ
(ಅರಣ್ಯಪಡೆ ಮುಖ್ಯಸ್ಥರು)

ಇವರಿಗೆ:

1. ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ(ವನ್ಯಜೀವಿ), ಬೆಂಗಳೂರು
2. ಎಲ್ಲಾ ಅಪರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳಿಗೆ.
3. ಎಲ್ಲಾ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳಿಗೆ
4. ಎಲ್ಲಾ ಉಪ ಅರಣ್ಯ ಸಂರಕ್ಷಣಾಧಿಕಾರಿಗಳಿಗೆ.
5. ಈ ಕಚೇರಿಯ ಎಲ್ಲಾ ಸಿಬ್ಬಂದಿ ವರ್ಗದವರಿಗೆ
6. ಈ ಕಚೇರಿಯ ಎ3 ಶಾಖೆಗೆ
7. ಅರಣ್ಯ ಇಲಾಖೆಯ ಅಧಿಕೃತ ವೆಬ್‌ಸೈಟ್ **www.aranya.gov.in** ರಲ್ಲಿ ಪ್ರಕಟಿಸಲಾಗಿದ್ದು, ಅದರಿಂದ ಮಾಹಿತಿ ಪಡೆಯಬಹುದಾಗಿದೆ.
8. ಕಚೇರಿಯ ಕಡತಕ್ಕೆ/ಹೆಚ್ಚುವರಿ ಪ್ರತಿ